

ಬಚ್ಚಿಡುತ್ತಿದ್ದಾರೆಂದು ಅನುಮಾನಿಸಿ ರಾಮಗೊಂಡ, 'ಯಾನಾತು? ನನ್ನ ಕೂಸಿಗಿ ಎಲ್ಲ ಆರಾಮ ಐತೆಲ್ಲ?' ಅನ್ನುವುದೇ ತಡ, ಸುನೀತಾ ಏಕದಮ್ ದುಃಖ ತಡೆಯದೆ ರೋದಿಸತೊಡಗಿದಳು. ಆತನ ಎದೆ ಹೊಡೆದುಕೊಳ್ಳಲು ಆರಂಭಿಸಿತು.

'ನಿನ್ನೆ ರಾತ್ರಿ ಮತ್ತ ಅಡ್ಮಿಟ್ ಮಾಡ್ಯಾರರಿ... ಅಮ್ಮ ಮತ್ತ ನಿಮ್ಮ ಅಳ್ಯಾ ಶಂಕರು ಕೂಡಿ...'

'ಯಾಕ? ಒಮ್ಮಿಗಿ ಯಾನಾತು ನನ್ನ ಕೂಸಿಗಿ? ಬಿಡಿಸಿ ಹೇಳಿರಿ...' ಆತನ ಗಂಟಲುಬ್ಬಿ ಬಂತು.

'ಮೈಯೆಲ್ಲ ಕೆರಕೊಳ್ಳತಿದ್ಲಲ್ಲ... ಅವು ಹುಣ್ಣು ಥರಾ ಆಗಿ ಹಾಸಿಗೆಲ್ಲೆಲ್ಲ ರಕ್ತ ಸೋರಾಕತ್ತಿತ್ತು... ಅದಕ್ಕ ಗಾಬರಿಯಾಗಿ ಅಡ್ಮಿಟ್ ಮಾಡ್ಯಾರರಿ...' ಅಂತಂದು ವಾಟ್ಸಾಪ್‌ನಲ್ಲಿ ಕಳಿಸಿದ ಚಿತ್ರಗಳನ್ನು ತೋರಿಸಿದಳು. ಎದೆ ಝಲ್ಲೆಂದಿತು. ಹಾಸಿಗೆ ತುಂಬಾ ರಕ್ತದ ಕಲೆಗಳ ಚುಕ್ಕೆಗಳು ಹರಡಿದ್ದವು. ರಾಮಗೊಂಡನ ತೊಡಿಯೊಳಗಿನ ಕಸುವೇ ಕರಗಿತು, ಸಾವರಿಸಿಕೊಂಡ. 'ಇರು, ಗುಡಿಯೊಳಗ ಎಲ್ಲಾ ವ್ಯವಸ್ಥಾ ಮಾಡಿ ಬರತೀನಿ... ನಡೀ ಹೋಗೋಣ... ಇನ್ನ ಹಂಗ ಬಿಟ್ಟರ ಮಗಳ ಕೈ ಬಿಡತಾಳ... ಬ್ಯಾಗ ಕಟಕೊ!' ಒಂದೇ ನೆಗೆತಕ್ಕೆ ಗುಡಿಯತ್ತ ಕುಂಡೆಗೆ ಕಾಲು ಹಚ್ಚಿ ಓಡಿದ. ಸುನೀತಾ ಹೊರಡುವ ಸಿದ್ಧತೆ ಮಾಡತೊಡಗಿದಳು.

ಸವಿತಾಳ ಪರಿಸ್ಥಿತಿ ಇನ್ನೂ ಹದಗೆಟ್ಟಿತ್ತು. ಹೊಟ್ಟೆ ಉಬ್ಬತೊಡಗಿತ್ತು. ಡಾ.ಸಾಖರೆಯನ್ನು ಭೇಟಿ ಮಾಡಿದ.

'ನಿಮ್ಮ ಕಡಿಂದ ನೀಗದಿದ್ದರ ಮೊದಲ ಹೇಳಬೇಕಿತ್ತು... ತಿಂಗಳಗಳ ಕಳೆದ್ವು... ನನ್ನ ಮಗಳ ಜಾಗಾದಾಗ ನಿಮ್ಮ ಮಗಳ ಇದ್ದಿದ್ದರ? ಈಗ ಕಮ್ಮಿ ಆಗದನ ಹೊಟ್ಟಿ ಉಬಾರಸಕ ಬ್ಯಾರೆ ಹತ್ತೇತಿ... ಎಷ್ಟಂತ ಕಾಯೋದು...? ಬರೇ ಕಮ್ಮಿ ಆಕ್ಕೇತಿ ಕಮ್ಮಿ ಅಕ್ಕೇತಿ ಅಂತೀರಿ...' ಸಿಟ್ಟು ಉಕ್ಕಿ ಬಂದಿತ್ತು. ತಡೆದುಕೊಳ್ಳಲು ಅಸಾಧ್ಯವಾಗಿತ್ತು.

'ಕೂಲ್ ಡೌನ್ ಸರ್ ... ಕೂಲ್ ಡೌನ್! ವಿ ಆರ್ ಟ್ರೈಯಿಂಗ್ ಅವರ್ ಲೆವೆಲ್ ಬೆಸ್ಟ್...'

'ಬೆಸ್ಟೂ ಬ್ಯಾಡ, ಗಿಸ್ಟೂ ಬ್ಯಾಡ, ಈಗಿಂದ ಈಗಲೇ ಡಿಸ್ಚಾರ್ಜ್ ಪೇಪರ್ ರೆಡಿ ಮಾಡ್ರಿ... ನಾವ್ ಬೇರೆ ಕಡೆಗೆ ಅಡ್ಮಿಟ್ ಮಾಡ್ತೇವಿ...' ಕಡ್ಡಿ ಮುರಿದಂತೆ, ಮತ್ತೊಂದು ಮಾತಿಗೆ ಅವಕಾಶ ಮಾಡಿ ಕೊಡದಂತೆ ರಾಮಗೊಂಡ ಅರಚಿದ. ಡಾ. ಸಾಖರೆ ಮುಖ ಬೇವಿನ ರಸ ಕುಡಿದಂತಾಯಿತು. ಬೆಲ್ ಹೊಡೆದ. 'ಆಯಿತು...ಹೊರಗ ಕೂಡ್ರಿ... ಬಿಲ್ ಕೊಡತಾರು...' ರಾಮಗೊಂಡ ಹೊರಬಂದ. ಕೆಲವು ನಿಮಿಷಗಳಲ್ಲಿ ಎರಡು ಲಕ್ಷ ಚಿಲ್ಲರೆ ಬಿಲ್ಲು ಬಂತು. ಅಮೃತಾ ಹಣ ಸಂದಾಯ ವ್ಯವಸ್ಥೆ ಮಾಡಿದಳು. ಶಂಕರು ಕಾರು ತಂದ. ಸವಿತಾಳನ್ನು ಡಾ. ಸಂಕೇಶ್ವರ ಅವರ ಹೈಟೆಕ್ ಆಸ್ಪತ್ರೆಗೆ ದಾಖಲಿಸಿದರು. ಸವಿತಾ ರೂಮ್ ನಂಬರ್ ಇಪ್ಪತ್ತೊಂದಕ್ಕೆ ಶಿಫ್ಟ್ ಆದಳು. ಡಾ. ಸಾಖರೆ ವೈದ್ಯ ವರದಿಗಳಿದ್ದವು. ಮತ್ತೊಮ್ಮೆ ತಪಾಸಣೆಗಳ ಲ್ಯಾಬ್‌ಗಳು ಜೀವ ಪಡೆದವು. ಲ್ಯಾಬ್ ಮತ್ತು ಔಷಧ ಅಂಗಡಿಗೆ ಮ್ಯಾರಾಥಾನ್ ಸ್ಪರ್ಧೆ ಏರ್ಪಟ್ಟಿತು.

* * *

ಡಾ. ಸಂಕೇಶ್ವರ ಎಂಡೋಸ್ಕೋಪಿ ಲ್ಯಾಬ್‌ನಿಂದ ತಮ್ಮ ರೂಮ್‌ಗೆ ಬಂದರು. ಅವರದು ಯಾವತ್ತೂ ಚಂದಿರ ಬೆಳಕಿನಂಥ ಪ್ರಸನ್ನವದನ ಮತ್ತು ನಗುಮುಖ. ಯಕೃತ್ತಿನ ಎಂಥೆಂಥ ಭಯಂಕರ ರೋಗಿಗಳಿದ್ದರೂ ಬದುಕಿನ ಭರವಸೆ ನೀಡುವ ಗಟ್ಟಿ ಮಾತು ಮತ್ತು ಶುಶ್ರೂಷೆಯಿಂದಲೇ ಅವರು ಪ್ರಸಿದ್ಧರು. ಎಷ್ಟೋ ರೋಗಿಗಳು ಯಕೃತ್ತಿನ ಮಾರಣಾಂತಿಕ ಕಾಯಿಲೆಗಳಿಂದ ಗುಣಮುಖರಾಗಿದ್ದಾರೆ. ಅವರನ್ನೇ ದೇವರೆಂದು ಕೈಮುಗಿದು ನಗುಮುಖದಿಂದ ಮನೆಗೆ ಮರಳಿದ್ದಾರಂತೆ! ರಾಮಗೊಂಡ ಬಕ ಪಕ್ಷಿಯಂತೆ ಕಾಯುತ್ತಿದ್ದ. ಡಾಕ್ಟರ್ ತಮ್ಮೆದುರಿನ ಸವಿತಾಳ ವರದಿಗಳನ್ನು ಪರಿಶೀಲಿಸುತ್ತಿರುವಂತೆ ಅನಿಸಿತು. ಹಾಗೂ ಅವರೂ ಸಹ ಸವಿತಾಳ ಉದರದ ವಿವಿಧ ಸ್ಕ್ಯಾನ್‌ಗಳನ್ನು ಮಾಡಿಸಿ ಅವುಗಳ ಅಧ್ಯಯನ